756 ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿ ಬಿದನೂರು ತಾಲ್ಲೂಕಿನಲ್ಲಿ ಮಟ್ಕಾ ದಂಧೆಯ ತೀವ್ರ ರೀತಿಯಲ್ಲಿ ನಡೆಯುತ್ತಿದ್ದು ಇದರಿಂದ ಬಡ ಕುಟುಂಬ ಹಾಗೂ ಕೂಲಿಕಾರರ ವರ್ಗದ ಕುಟುಂಬಗಳು ಬೀದಿ ಪಾಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಮಟ್ಕಾ ದಂಧೆಯನ್ನು ನಡೆಸುತ್ತಿರುವವರ ವಿರುದ್ಧ ಇದುವರೆವಿಗೂ ಕೈಗೊಂಡಿರುವ ಕ್ರಮವೇನು?

ಇ) ಈ ಮಟ್ಕಾ ಹಾವಳಿಯನ್ನು ತಪ್ಪಿಸಲು ಸರ್ಕಾರವು ಕೈಗೊಳ್ಳುವ ಮುಂದಿನ ಕ್ರಮವೇನು?

ಶ್ರೀ ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಗೌರಿ ಬಿದನೂರು ತಾಲ್ಲೂಕಿನಲ್ಲಿ ಮಟ್ಕಾ ಆಡುವವರ ಮೇಲೆ ಸೂಕ್ತ ನಿಗಾವಣೆಯನ್ನು ಇರಿಸಲಾಗಿದ್ದು, ಮಟ್ಕಾ ತಡೆಯುವ ನಿಟ್ಟಿನಲ್ಲಿ ಎಲ್ಲಾ ಅಗತ್ಯ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ, ಗೌರಿ ಬಿದನೂರು ತಾಲ್ಲೂಕಿನಲ್ಲಿ 2007ನೇ ಸಾಲಿನಲ್ಲಿ 8, 2008ನೇ ಸಾಲಿನಲ್ಲಿ 3, ಹಾಗೂ 2009 ಸಾಲಿನಲ್ಲಿ ಇಲ್ಲಿಯವರೆಗೂ 8 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ.

ಮಟ್ಕಾ ದಂಧೆಯು ತೀವ್ರತರವಾದ ರೀತಿಯಲ್ಲಿ ನಡೆಯುತ್ತಿದ್ದ ಬಗ್ಗೆಯಾಗಲೀ ಇದರಿಂದ ಬಡ ಕುಟುಂಬ ಹಾಗೂ ಕೂಲಿಕಾರರ ವರ್ಗದ ಕುಟುಂಬಗಳು ಬೀದಿ ಪಾಲಾಗುತ್ತಿರುವುದು ಗಮನಕ್ಕೆ ಬಂದಿರುವುದಿಲ್ಲ

English version

Suitable watch is being kept on the matka gamblers in Gowribidanur Taluk. All necessary action **is taken** to prevent matka gambling. During 2007, eight cases, during 2008, 3 cases and during 2009 till now eight cases are registered.

It has not come to the notice of Government that matka gambling is taking place on a wide scale and that poor families and families of labourers are affected.

ಆ) ಗೌರಿಬಿದನೂರು ತಾಲ್ಲೂಕಿನಲ್ಲಿ ಮಟ್ಕಾ ದಂಧೆ ನಡೆಸುತ್ತಿರುವವರು ಯಾರು ಇರುವುದಿಲ್ಲ. ಅದರಿ ಮಟ್ಕಾ ದಂಧೆ ನಡೆಸುವ ಅಸಾಮಿಗಳು ನೆರೆಯ ಆಂಧ್ರ ಪ್ರದೇಶ ರಾಜ್ಯದವರಾಗಿದ್ದು, ಅಲ್ಲಿಂದಲೇ ಕಾರ್ಯಾಚರಣೆಯನ್ನು ಮೊಬೈಲ್ ಫೋನ್‌ಗಳ ಮೂಲಕ ನಡೆಸುತ್ತಿದ್ದು, ಅವರುಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಗೌರಿ

ಬಿದನೂರು ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಮಟ್ಕಾ ಆಡುವವರ ಮೇಲೆ ಪ್ರಕರಣಗಳನ್ನು ಈ ಕೆಳಕಂಡಂತೆ ದಾಖಲು ಮಾಡಿ ಕಾನೂನು ರೀತ್ಯಾ ಸೂಕ್ತ ಕ್ರಮ ಕೈಗೊಂಡಿರುತ್ತೆ.

ವರ್ಷ	ಮಟ್ಕಾ		
	ದಾಖಲಾದ ಪ್ರಕರಣಗಳ ಸಂಖ್ಯೆ	ಆರೋಪಿಗಳ ಸಂಖ್ಯೆ	ನ್ಯಾಯಾಲಯ ದಿಂದ ವಿಧಿಸಲಾದ ದಂಡದ ಮೊತ್ತ
2007	8	9	1695/–
2008	3	8	2,800/–
2009	8	12	8,731/–

English version

There are no local persons who are running matka gambling in Gowribidanur Taluk. The sponsorers of matka gambling is from neighbiuring Andhra Pradesh and they operate from there only through cell phone. Necessary action is taken against them as per law. The particulars of cases booked on matka gamblers in Gowribidanur for the last 3 years is given below.

Year	**No.of cases booked**	**No.of accused**	**Amount of penalty imposed by Court Rs.**
2007	8	9	1695/-
2008	3	8	2,800/-
2009	8	12	8,731/-

ಇ) ಈಗಾಗಲೇ ಸಾಕಷ್ಟು ಕ್ರಮವನ್ನು ಕೈಗೊಳ್ಳಲಾಗಿದೆ. ಈ ಹಾವಳಿಯನ್ನು ತಪ್ಪಿಸಲು ಎಲ್ಲಾ ರೀತಿಯ ಬಿಗಿ ಕ್ರಮವನ್ನು ಕೈಗೊಳ್ಳಲಾಗುವುದು.

English version

Adequate action has already been taken. All strict measures will be taken to control this menace.

757 ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?